**ಓ.ಎಸ್. ನಂಃ 48/2019**

**ಡಿ. ಡಬ್ಲ್ಯೂಃ 1**

**ದಿನಾಂಕ 03.11.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ವಾದಿಯ ಪರ ಃ ಶ್ರೀ.ಜಿ.ಎಲ್.ಡಿ. ಎಲ್‌ವಕೀಲರಿಂದಃ</u>**

1. ನಾನು 9 ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಮಾಡಿರುತ್ತೇನೆ. ನನಗೆ ಕನ್ನಡ ಭಾಷೆ ಸರಿಯಾಗಿ ಓದಲು ಬರುವುದಿಲ್ಲ. ನಾನು ನನ್ನ ಸಹಿಯನ್ನು ಕನ್ನಡ ಭಾಷೆಯಲ್ಲಿಯೇ ಮಾಡುತೆತೇನೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಹಾಗೂ ಪ್ರತಿವಾದ ಪತ್ರವು ಆಂಗ್ಲ ಭಾಷೆಯಲ್ಲಿರುವ ಕಾರಣ ಅದರಲ್ಲಿ ಬರೆದಿರುವ ವಿಷಯಗಳ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿ.

2. ಯಾವ ಆಧಾರದ ಮೇಲೆ ಸರ್ವೇ ನಂಬರ್ 79/1 ರ 4 ಕಾಲು ಗುಂಟೆ ನನ್ನ ತಾತನಾದ ಸಿದ್ದಿಕ್ಕಾಳೇಗೌಡರ ಹೆಸರಿಗೆ ವರ್ಗಾವಣೆ ಆಗಿರುತ್ತದೆ ಎಂದು ನಿಡಿ.2 ರಿಂದ 4 ರ ದಾಖಲೆಗಳಲ್ಲಿ ನಮೂದಾಗಿರುವುದಿಲ್ಲ ಎಂದರೆ ಸರಿಯಲ್ಲ. ತಹಸೀಲ್ದಾರ್ ರವರ ಕೈ ತಪ್ಪಿನಿಂದ ನಿಡಿ.2 ರಿಂದ 4 ರ ದಾಖಲೆಗಳಲ್ಲಿ ನನ್ನ ತಂದೆಯಾದ ಜವರೇಗೌಡ ಬಿನ್ ಸಿದ್ದಿಕ್ಕಾಳೇಗೌಡರ ಹೆಸರು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ತಹಸೀಲ್ದಾರ್ ರವರ ಕೈ ತಪ್ಪಿನಿಂದ ನಿಡಿ.2 ರಿಂದ 4 ರ ದಾಖಲೆಗಳಲ್ಲಿ ನನ್ನ ತಂದೆಯಾದ ಜವರೇಗೌಡ ಬಿನ್ ಸಿದ್ದಿಕ್ಕಾಳೇಗೌಡರ ಹೆಸರು ನಮೂದಾಗಿರುವುದನ್ನು ರದ್ದುಪಡಿಸುವಂತೆ ಕೋರಿ ವಾದಿಯು ಹುಣಸೂರಿನ ಮಾನ್ಯ ಉಪವಿಭಾಗಾಧಿಕಾರಿಯವರ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಪ್ರಕರಣದಲ್ಲಿ ನಮ್ಮ ಪರ ಆದೇಶವಾಗಿರುತ್ತದೆ ಎಂದು ಸ್ವತಃ ನುಡಿದಿರುತ್ತಾರೆ. ಸದರಿ ಮಾತು ಸುಳ್ಳು ಎಂದರೆ ಸರಿಯಲ್ಲ. ಉಪವಿಭಾಗಾಧಿಕಾರಿಯವರ ನ್ಯಾಯಾಲಯದಲ್ಲಿ ನಮ್ಮ ಪರ ಆದೇಶವಾಗಿರುವುದಿಲ್ಲ ಎಂದರೆ ಸರಿಯಲ್ಲ. ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳುವಂತೆ ಆದೇಶಿಸಿ ಉಪವಿಭಾಗಾಧಿಕಾರಿಯವರ

ನ್ಯಾಯಾಲಯದಲ್ಲಿ ವಾದಿಯು ಸಲ್ಲಿಸಿದ್ದ ಅರ್ಜಿ ಮುಕ್ತಾಯಗೊಂಡಿರುತ್ತದೆ ಎಂದರೆ ಸರಿಯಲ್ಲ.

3. ವಾದಿಯು ಉಪವಿಭಾಗಾಧಿಕಾರಿಯವರ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಸದರಿ ಅರ್ಜಿಯ ನೋಟಿಸು ನನ್ನ ತಂದೆಯಾದ 1 ನೇ ಪ್ರತಿವಾದಿಗೆ ಹೋಗಿರದ ಕಾರಣ ಸದರಿ ಪ್ರಕರಣದಲ್ಲಿ 1 ನೇ ಪ್ರತಿವಾದಿ ಹಾಜರಾಗಿರುವುದಿಲ್ಲ ಎಂದರೆ ಸರಿಯಲ್ಲ. ಉಪವಿಭಾಗಾಧಿಕಾರಿಯವರ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಸದರಿ ಅರ್ಜಿಯ ನೋಟಿಸು ನಿಮ್ಮ ತಂದೆಯವರಿಗೆ ಬಂದಿರದಿದ್ದರು ಸಹ ಹಾಗೂ ಸದರಿ ಪ್ರಕರಣದಲ್ಲಿ ನಿಮ್ಮ ತಂದೆಯವರು ಹಾಜರಾಗದಿದ್ದರು ಸಹ ಹಾಗೂ ಸದರಿ ಪ್ರಕರಣದಲ್ಲಿ ನಿಮ್ಮ ತಂದೆಯವರ ಪರ ಆದೇಶವಾಗದಿದ್ದರು ಸಹ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ನಿಡಿ.2 ರಿಂದ 4 ರ ದಾಖಲೆಗಳಲ್ಲಿ ನನ್ನ ತಂದೆಯಾದ 1 ನೇ ಪ್ರತಿವಾದಿಯ ಹೆಸರಿಗೆ ದಾಖಲಾಗಿರುವ ಸರ್ವೇ ನಂಬರ್ 79/1 ರ 4 ಕಾಲು ಗುಂಟೆ ಜಮೀನಿನ ಸ್ವಾಧೀನದಲ್ಲಿ ನಾವು ಇಲ್ಲ ಎಂದರೆ ಸರಿಯಲ್ಲ. ನಮ್ಮ ಸರ್ವೇ ನಂಬರ್ 79/1 ರ 4 ಕಾಲು ಗುಂಟೆ ಜಮೀನಿನ ಚೆಕ್ಕುಬಂಧಿ ಪೂರ್ವಕ್ಕೆ-ನನ್ನ ಚಿಕ್ಕಪ್ಪನಾದ ಮಹದೇವರವರ ಜಮೀನು, ಪಶ್ಚಿಮಕ್ಕೆ-ನಾಗಮ್ಮರವರ ಜಮೀನು, ಉತ್ತರಕ್ಕೆ-ಮಹದೇವೇಗೌಡರ ಜಮೀನು ಮತ್ತು ದಕ್ಷಿಣಕ್ಕೆ-ಭನ್ನಮ್ಮ ದೇವರ ದೇವಸ್ಥಾನದ ಜಮೀನು ಇದೆ.

**ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**